Reg.No. M. 1550.
KODAGU" MERCARA, (Coorg).

- 17 -

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೫ | ತಾರೀಕು ೨೨—೯—೧೯೪೪ನೇ ಶುಕ್ರವಾರ. | ಸಂಚಿಕೆ ೧೬.

ಗಾಂಧಿ ಜಿನ್ನಾ ಮೂತುಕಥೆ.

ತಾ. 9-9-44 ರಿಂದ ಪ್ರಾರಂಭವಾದ ಗಾಂಧಿ-ಜಿನ್ನಾರವರ ಮೂತುಕಥೆಯು ಇನ್ನೂ ಮುಗಿದಿರುವದಿಲ್ಲ ತಾ. 20 ರ ವರೆಗೆ ಒಟ್ಟು 15 ಗಂಟೆ 45 ನಿಮಿಷಗಳ ಮೂತುಕತೆಯಾಗಿದೆ. ಇನ್ನೂ ಮೂತುಕತೆಯು ಮುಂದರಿಯುವದು. ಈ ತಿಂಗಳ ಅಂತ್ಯದ ವರೆಗೆ ಈ ಭೇಟಿಯು ಸಾಗಬಹುದೆಂದು ಊಹಿಸಲಾಗಿದೆ. ಈ ಮೂತುಕತೆಯ ಮಧ್ಯೆ ಪತ್ರವ್ಯವಹಾರವೂ ನಡೆಯುತ್ತಿದೆ. ಚರಿತ್ರಾರ್ಹವಾದ ಈ ಮೂತುಕತೆಯನ್ನು ನಡೆಸುತ್ತಿರುವ ಈ ಎರಡು ಮಹಾವ್ಯಕ್ತಿಗಳ ಆರೋಗ್ಯವು ಜೆನ್ನಾಗಿಲ್ಲ. ತಾ. 14 ರ ಸಾಯಂಕಾಲ ಮಿ. ಜಿನ್ನಾರವರು ತಾವು ಶಕ್ತಿಹೀನರಾಗಿರುವದನ್ನು ಗಾಂಧೀಜಿಗೆ ತಿಳಿಸಿ ಅನಂತರ ಅಂಗಮರ್ದನದಿಂದ ನೋವು ವಾಸಿಯಾಗುವದೇ ಎಂದು ಪ್ರಶ್ನಿಸಿದರು. ಗಾಂಧೀಯವರೂ ತಮ್ಮ ನೈಸರ್ಗಿಕ ರೋಗತಜ್ಞರಾದ ಡಾ. ಮೆಹತಾರವರು ನಗರದಲ್ಲಿರುವರೆಂಯೂ ಅವರಿಂದ ದೇಹಪರೀಕ್ಷಿಸುವದು ಹಿತವೆಂದೂ ಸೂಚನೆಯಿತ್ತರು. ಅದೇ ರೀತಿ ಜಿನ್ನಾರವರು ದೇಹಪರೀಕ್ಷೆ ಮಾಡಿಸಿಕೊಂಡರು.

ಗಾಂಧಿ ಜಿನ್ನಾ ಮೂತುಕತೆಯಲ್ಲಿ ಎರಡು ಮುಂದಾಳುಗಳೂ ಒಪ್ಪಂದದ ಪ್ರಧಾನ ವಿಚಾರಗಳಲ್ಲಿ ಏಕಭಿಪ್ರಾಯಕ್ಕೆ ಬಂದಿರುವರೆಂದು ಊಹಿಸಲಾಗಿದೆ.

—೦೦—

ಸತ್ತವರನ್ನು ಬದುಕಿಸಬಲ್ಲರು!

ಜರ್ಮನರಲ್ಲಿ ಇನ್ನೂ ಗುಪ್ತಾಸ್ತ್ರಗಳಿವೆಯಾದರೆ, ರಷ್ಯನರು ಸತ್ತವರನ್ನು ಬದುಕಿಸಬಲ್ಲರಂತೆ! ಮೋಸ್ಕೋ ರೇಡಿಯೋವೆ ಈ ಸುದ್ದಿಯನ್ನು ಸಾರಿದೆ. ವೈದ್ಯ ವಿಚಕ್ಷಣರೊಬ್ಬರು ಹಲವಾರು ಶೋಧನೆಗಳನ್ನು ನಡೆಸಿ, ಗಾಯಗೊಂಡು ಕೊನೆಯುಸಿರು ಬಿಡುತ್ತಿದ್ದವರನ್ನು ಅಥವಾ ಸತ್ತು ಕೆಲವೇ ನಿಮಿಷ ಸಂದವರನ್ನು ಬದುಕಿಸಬಹುದೆಂದಿದ್ದಾರೆ. ಕೆಲವರನ್ನು ಬದುಕಿಸಿ ಈ ವೈದ್ಯರು ಇಷ್ಟರಲ್ಲೇ ಯಶಸ್ವಿಗಳಾಗಿದ್ದಾರೆ.

—೦೦—

ಕಸ್ತೂರ್ ಬಾ ನಿಧಿ.

ಕಸ್ತೂರ್ ಬಾ ನಿಧಿಗೆ ತಾ. 15 ರ ವರೆಗೆ 70 ಲಕ್ಷ ರೂಪಾಯಿಗಳು ಕೂಡಿವೆ. ನಿಶ್ಚಿತವಾದ ಅಂದರೆ ಆಕ್ಟೋಬರ್ 2 ರೊಳಗೆ ಇದು 75 ಲಕ್ಷವನ್ನು ದಾಟಬಹುದು. ನಿಧಿಯು 80 ಲಕ್ಷಕ್ಕೆ ಮುಟ್ಟಬಹುದೆಂದು ಕಾರ್ಯದರ್ಶಿಗಳಾದ ಶ್ರೀ ಅಮೃತಲಾಲ್ ಥಕ್ಕರ್‌ರವರು ಹೇಳಿರುವರು. ಬೊಂಬಾಯಿಯು ಈ ನಿಧಿಸಂಗ್ರಹದಲ್ಲಿ 16 ಲಕ್ಷ ರೂಪಾಯಿಗಳನ್ನು ಶೇಕರಿಸಿ ಪ್ರಥಮಸ್ಥಾನ ಪಡೆದಿದೆ. ಕಲ್ಕತ 9¼ ಲಕ್ಷ, ಸಂಯುಕ್ತ ಪ್ರಾಂತ 7¼ ಲಕ್ಷ, ಬೀಹಾರ್ 4½ ಲಕ್ಷ, ಗುಜರಾಥ 5¼ ಲಕ್ಷ ಮದ್ರಾಸು 5¾ ಲಕ್ಷ, ಮೈಸೂರು, ಹೈದರಬಾದು ಮೊದಲಾದ ಸಂಸ್ಥಾನಗಳು ಒಂದೊಂದು ಲಕ್ಷಕ್ಕಿಂಥಾ ಹೆಚ್ಚಿಗೆ ಧನ ಸಹಾಯ ಮಾಡಿವೆ.

—೦೦—

ಬೊಂಬಾಯಿಯಲ್ಲಾದ ಸ್ಫೋಟನ.

ಕಳೆದ ಏಪ್ರಿಲ್ ತಿಂಗಳಲ್ಲಿ ಬೊಂಬಾಯಿಯಲ್ಲಿ ನಡೆದ ಭಯಂಕರ ಸ್ಫೋಟನದ ಬಗ್ಗೆ ನೇಮಿಸಲ್ಪಟ್ಟ ವಿಚಾರಣ ಸಮಿತಿಯು ವಿಚಾರ ವಿನಿಮಯಮಾಡಿ 'ಯುದ್ಧ ಪರಿಸ್ಥಿತಿಗಳ ಮೂಲಕ ಮದ್ದುಗುಂಡುಗಳಿಂದ ತುಂಬಿದ ಹಡಗಗಳನ್ನು ಬಂದರದಲ್ಲಿ ತರುವ ಕ್ರಮ ಕೈಕೊಂಡುದು ಅಪಘಾತಕ್ಕೆ ಸಿಕ್ಕಿದ ಹಡಗದಲ್ಲಿ ಅಳಿಕಿ ಗಂಟುಗಳನ್ನು ಮದ್ದು ಮತ್ತು ಸ್ಫೋಟಕ ಪದಾರ್ಥಗಳ ಕೆಳಗೂ ಮೇಲು ಕರಾಚಿಯಲ್ಲಿ ಒಟ್ಟಿದುದು, ಕೆಳಭಾಗದಲ್ಲಿದ್ದ ಎರಡನೇ ಕೋಣೆಯಲ್ಲಿದ್ದ ಅರಳಿಗಳಿಗೆ ಅಕಸ್ಮಾತು ಬೆಂಕಿಹತ್ತಿದುದು, ಹತ್ತಿದಬೆಂಕಿಯ ಉಗ್ರ ಸ್ವರೂಪವನ್ನು ಕಂಡುಹಿಡಿದು ಯೋಗ್ಯ ಉಪಾಯ ಕೈಕೊಳ್ಳಲು ಅಧಿಕಾರಿಗಳು ತಪ್ಪಿದುದು, ಕೊನೆಯು ಅಜ್ಞೆ ಕೊಡುವ ಅಧಿಕಾರಿಯು ಅಲ್ಲೇ ಇರದಿದ್ದುದು ಮೊದಲಾದ ಕಾರಣಗಳ ಮೂಲಕ ಏಪ್ರಿಲ್ 14 ರಲ್ಲಿ ಬೊಂಬಾಯಿ ಬಂದರದಲ್ಲಿ ನಡೆದ ಭೀಕರ ಅನಾಹುತಕ್ಕೆ ಕಾರಣವಾಯಿತು. ಅಧಿಕಾರಿಗಳ ಅಲಕ್ಷ್ಯವೇ ಇದಕ್ಕೆ ಕಾರಣವೆಂದು ವರದಿ ಮಾಡಿರುವರು.

—೦೦—

ಚರ್ಚಿಲ್ ರೂಸ್ವೆಲ್ಟ್ ಭೇಟಿ.

ರಾಜಕೀಯ ಜಿಕ್ಕಟ್ಟನ್ನು ಬಿಡಿಸಲು ಹಿಂದೂದೇಶದಲ್ಲಿ ನಡೆಯುತ್ತಿರುವ ಗಾಂಧಿ-ಜಿನ್ನಾ ಮೂತುಕತೆಯ ಕಡೆಗೆ ಇಡೀ ಜಗತ್ತಿನ ದೃಷ್ಟಿ ಸೆಳೆಯಲ್ಪಟ್ಟಿದೆ. ಹಿಂದೂದೇಶದಲ್ಲಿ ಒಮ್ಮತವನ್ನು ಹುಟ್ಟಿಸಲು ಛಲದಿಂದ ಕೂಡಿದ ಈ ಅದ್ವಿತೀಯ ಮುಂದಾಳುಗಳ ಪ್ರಯತ್ನದಿಂದ ಬ್ರಿಟನಿನ ರಾಜಕಾರಣಿಗಳಿಗೆ ಗಾಬರಿಯಾಗತೊಡಗಿದೆ. ಹಿಂದೂಸ್ಥಾನವು ಒಂದಾಗಿ ಬ್ರಿಟಿಷರ ಕೈಬಿಟ್ಟರೆ ಬ್ರಿಟಿಷರ ಗತಿ ಅಧೋಗತಿಯಾಗುವದೆಂದು ಅವರಿಗೆ ತಿಳಿದಿದೆ. ತನ್ನ ವಿಶ್ವಾಸ ಮಂತ್ರಿತ್ವದ ಈ ಸಮಯದಲ್ಲಿ ಹಿಂದೂದೇಶವು ಬ್ರಿಟಿಷ್ ಸಾಮ್ರಾಜ್ಯದಿಂದ ಬೇರಾಗಲು ಬಿಡಬಾರದೆಂಬ ಆಶೆ ಚರ್ಚಿಲ್ಲರಿಗಿದೆ. ಈ ಆಶೆಯನ್ನು ಹಲವು ಬಾರಿ ಅವರು ಆಡಿಯೂ ತೋರಿಸಿದ್ದಾರೆ. ಇದಕ್ಕನುಸಾರವಾಗಿ ಲಂಡನಿನ ಪತ್ರಿಕೆಗಳು ಅಪಪ್ರಚಾರಕ್ಕೆ ತೊಡಗಿವೆ. ಗಾಂಧಿ-ಜಿನ್ನಾ ಒಪ್ಪಂದವಾದರೆ ಹಿಂದೂದೇಶದ ಸಮಸ್ಯೆ ಬಗೆಹರಿದಂತಾಗಲಿಲ್ಲ. ಸಿಕ್ಕರು, ಮತ್ತಿತರ ಅಲ್ಪ ಸಂಖ್ಯಾಕರ ಪಂಗಡಗಳ ಪ್ರಶ್ನೆಯೂ ಬಗೆಹರಿಯಬೇಕು ಎಂದು ಹೇಳುತ್ತಿವೆ. ಈ ಮಧ್ಯೆ ಹಿಂದೂದೇಶದಲ್ಲಿಯು ಬ್ರಿಟಿಷರ ನೀತಿಯನ್ನು ಸ್ಪಷ್ಟವಾಗಿ ವಿವರಿಸಿದ ಫಿಲಿಪ್ಸರ ಪತ್ರವು ಮೂರು ಭೂಖಂಡಗಳನ್ನು ನಡುಗಿಸಿತು. ಅಮೇರಿಕನರು ಪೂರ್ಣ ಸುಧಾರಿಸದಿದ್ದರೂ ಅವರ ಪರಿಸ್ಥಿತಿಯಲ್ಲಿ ಒದಲಾವಣೆಯಾಗುತ್ತಿದೆ. ಪ್ರಜಾಪ್ರಭುತ್ವಕ್ಕಾಗಿ ರಣಕಣಕ್ಕಿಳಿದಿರುವ ಅಮೇರಿಕವು ಆ ತತ್ವದ ಕೊಲೆಯು ತನ್ನ ಮಿತ್ರನಿಂದ ಆಗುತ್ತಿರುವದನ್ನು ಸಹಿಸಿ ಎಷ್ಟು ದಿನ ಕೂರುವದೋ ನೋಡಬೇಕು, ಅಮೇರಿಕ ಜನರು ಹಿಂದೂಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಬೇಕು. ಅದು ತಮ್ಮ ಹೆಸರಿಗೆ ಕಳಂಕಪ್ರಾಯವಾಗಿದೆಯೆಂದು ಒತ್ತಾಯಪಡಿಸುತ್ತಿರುವದರಿಂದ ರೂಸ್‌ವೆಲ್ಟ--ಚರ್ಚಿಲ್ ಭೇಟಿಯಲ್ಲಿ ಹಿಂದೂದೇಶದ ವಿಷಯ ಚರ್ಚಿಸಲ್ಪಡುವದೆಂದು ಊಹಿಸಲಾಗಿದೆ.

—೦೦—

ಲಂಡನಿನಲ್ಲಿ ಓರ್ವ ಹಿಂದೀಯನಿಗೆ ಶಿಕ್ಷೆ.

ತಾ. 14ರಲ್ಲಿ ಲಂಡನ್ ನಗರದ ನ್ಯಾಯಸ್ಥಾನದಲ್ಲಿ 34 ವರ್ಷ ವಯಸಿನ ಹಿಂದೀಯನಾದ ಶ್ರೀ ನಾನಾಭಾಯಿ ಪಟೇಲನ ವಿಚಾರಣೆ ನಡೆಯಿತು. ಚಕ್ರವರ್ತಿಗಳ ಸೈನ್ಯ ಪೋಷಾಕು ಧರಿಸಲು ನಿರಾಕರಿಸಿದ ಆರೋಪದ ಮೇರೆಗೆ ಇವರನ್ನು ಸೈನ್ಯ ಕೋರ್ಟಿನವರು 93 ದಿನಗಳ ಶಿಕ್ಷೆಗೆ ಗುರಿಪಡಿಸಿದ್ದರು. ಆದರೆ ಶ್ರೀ ಪಟೇಲರ ಪರವಾಗಿ ಕೂಲಿಕಾರ ಸದಸ್ಯ ಮಿ. ಸ್ಟಿಫೆನ್ ಮುರ್ರೆರವರು ವಾದಿಸಲಿರುವರು. ಇದೇ ತಪ್ಪಿಗಾಗಿ ಶ್ರೀ ಸುದೇಶವೈದ್ಯರಿಗೆ ಶಿಕ್ಷೆಯಾಗಿತ್ತು.

—೦೦—

ವಿದ್ಯಾ ಪತ್ನಿ.

ಗಂಡನು ತಾನು ವಿವಾಹ ಮಾಡಿಕೊಂಡ ಪತ್ನಿಗೆ ಇಂಗ್ಲಿಷ್ ಗೊತ್ತುಂಟೆಂದು ಭಾವಿಸಿದ್ದನು. ಹಾಗೆ ಅವನು ಭಾವಿಸಿಕೊಂಡುದು ಬಿಡಗಿನ ಹೆಂಡತಿಗೆ ಒಂದು ಹೆಮ್ಮೆ. ಒಂದು ದಿನ ಗಂಡನು ಆಫೀಸಿನಿಂದ ಮನೆಗೆ ಬರುತ್ತಿರುವುದನ್ನು ನೋಡಿ, ಆಕೆ ಇಂಗ್ಲಿಷ್ ಗಜೆಟ್ಟೊಂದನ್ನು ತೆಗೆದು ಕುರ್ಚಿಯಲ್ಲಿ ಕುಳಿತುಕೊಂಡು ಓದುವಂತೆ ನಟ್ಟಿಸಿದಳು. ಗಂಡನು ತನ್ನ ಸಮೀಪಕ್ಕೆ ಬಂದರೂ ಕೂಡ ತುಂಬಾ ಆಸಕ್ತಿಯಿಂದ ಓದುವುದರಲ್ಲಿ ಮಗ್ನಳಾಗಿರುವಂತೆ ಪತ್ರಿಕೆಯ ಮೇಲಿನಿಂದ ತನ್ನ ಕಣ್ಣುಗಳನ್ನು ಒಂದಿಷ್ಟು ಮಿಸುಕಲಿಲ್ಲ. ತುಟಿ ಮಾತ್ರ ಅಲ್ಲಾಡುತ್ತಿತ್ತು. ಗಂಡನು ಪತ್ರಿಕೆಯನ್ನು ನೋಡಿದನು, ಹಾಗೆಯೇ ತಿರಸ್ಕಾರದ ನಗುವನ್ನು ಬೀರಿದನು. ಯಾಕೆಂದರೆ ಪತ್ರಿಕೆಯು ಅವಳ ಕೈಯ್ಯಲ್ಲಿ ತಿರುಗಮುರುಗವಾಗಿತ್ತು.

—೦೦—

ಶಾಂತಿ ಸಮ್ಮೇಳನ ಮತ್ತು ಇಂಡಿಯ.

ಯುದ್ಧಾನಂತರ ನಡೆಯುವ ಪ್ರಪಂಚದ ಶಾಂತಿ ಸಮ್ಮೇಳನದಲ್ಲಿ ಇಂಡಿಯವು ಭಾಗವಹಿಸಬೇಕು. ಇಂಡಿಯದ ಹಕ್ಕುಬಾಧ್ಯತೆಗಳನ್ನು ಶಾಂತಿ ಸಮ್ಮೇಳನದಲ್ಲಿ ಸರಿಯಾಗಿ ಸಮರ್ಥಿಸಿ ಅಪುಗಳನ್ನು ಸಮ್ಮೇಳನವು ಒಪ್ಪುವಂತೆ ಮಾಡಬೇಕು. ಈ ಬಗ್ಗೆ ಭಾರತವು ಕೈಗೊಳ್ಳಬೇಕಾದ ಕ್ರಮವೇನು ಎಂಬ ವಿಚಾರಗಳನ್ನು ಗಾಂಧಿ-ಜಿನ್ನಾ ಮೂತುಕತೆಗಳಲ್ಲಿ ಪರಿಶೀಲಿಸಿ ನಿರ್ಧರಿಸಲಾಗುವುದು. ಈ ಬಗ್ಗೆ ತೃಪ್ತಿಕರವಾದ ನಿರ್ಧಾರ ಏರ್ಪಡದಿದ್ದರೆ ಸಂಧಾನವನ್ನು ಮುಂದುವರಿಸಿ ಮತ್ತೆ ಪರಿಶೀಲನೆ ನಡೆಸಲಾಗುವುದು. ಅಂತೂ ಸಂಧಾನವು ವಿಫಲವಾಗಕೂಡದೆಂದೂ ಒಪ್ಪಂದವು ಏರ್ಪಡಬೇಕೆಂದೂ ಮುಖಂಡರುಗಳ ಪ್ರಬಲವಾದ ಆಶಯವಾಗಿದೆ.

—೦೦—

—ವೀರಾಜಪೇಟೆಗೆ 'ಕೊಡಗು' ಏಜೆಂಟರು—
—ಶ್ರೀ ಕೆ. ಎಂ. ಸುಬ್ರಾಯನವರು—

ಕೊ ಡ ಗು

ತಾ. ೨೨-೯-೧೯ಳಳನೇ ಶುಕ್ರವಾರ

ನಿರಾಶೆಯ ಭವಿಷ್ಯ.

ಯೂರೋಪು ಯುದ್ಧವು ತನ್ನ ಕಡೇ ಅಂಕಕ್ಕೆ ಬಂದು ತಲಪಿದೆ. ಯುದ್ಧದ ಝಳದಿಂದ ಪರಿತಪ್ತರಾದ ಜನರು ಭವಿಷ್ಯದಲ್ಲಿ ತಮ್ಮ ಜೀವನವು ಸುಖಮಯವಾಗಬಹುದು; ಜೀವನದ ಅನುಕೂಲತೆಗಳು ಒದಗಿ ಸಾರ್ವತ್ರಿಕವಾಗಿ ಹರಡಿರುವ ಜಗುಪ್ಸೆಯು ಮಾಯವಾಗಿ ಸರ್ವತೋಮುಖವಾದ ಅಭಿವೃದ್ಧಿ ಆಗಬಹುದೆಂದು ಆಶಿಸತೊಡಗಿದ್ದಾರೆ. ಈ ಆಶೆಯಿಂದ ಒಂದರ ಒಂದರಂತೆ ನಂತರ ಯುದ್ಧದನಂತರಕ್ಕೆ ರುವ ಯೋಜನೆಗಳು ಹೊರಬೀಳುತ್ತಿವೆ. ಇಂದು ಜನತೆಯು ಕಲ್ಪಿಸಿಕೊಳ್ಳುತ್ತಿರುವಂತೆ, ಮನಸಿನಲ್ಲಿ ಚಿತ್ರಿಸುತ್ತಿರುವಂತೆ ಮುಂದಿನ ದಿನಗಳು ನಿಜವಾಗಿಯೂ ಸುದಿನಗಳಾಗಿ ಪರಿಣಮಿಸುವವೇ? ಇಂದು ಸರ್ವಶಕ್ತರಾಗಿ ವಿಜಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರಗಳ ವರ್ತನೆಯು ಇದಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿವೆ.

ಎರಡು ಉದಾಹರಣೆಗಳನ್ನು ಪರೀಕ್ಷಿಸುವಾ. ತೈಲೇಂಡು (ಸಯಾಮು) ಜಪಾನರ ವಶದಲ್ಲಿದೆ. ಇದರ ಬಗ್ಗೆ ಯಾವ ರೀತಿಯ ಧೋರಣೆಯನ್ನು ತಳೆಯ ಬೇಕೆಂಬ ವಿಚಾರದಲ್ಲಿ ಬ್ರಿಟನ್, ಅಮೇರಿಕಾಗಳಲ್ಲಿ ತೀವ್ರ ವಿರುದ್ಧ ಅಭಿಪ್ರಾಯಗಳಿರುವವೆಂದು ಗೊತ್ತಾಗಿದೆ. ಜಪಾನರು ಆಕ್ರಮಿಸುವ ಮೊದಲಿದ್ದಂತೆಯೇ ತೈಲೇಂಡಿಗೆ ಅದರ ಅಧಿಕಾರವನ್ನು ಬಿಟ್ಟು ಕೊಡುವದು ಅವಶ್ಯವೆಂದು ಅಮೇರಿಕನರು ಹೇಳುತ್ತಾರೆ. ಬರ್ಮಾ, ಮಲಯಾ ಪ್ರಾಮುಖ್ಯವಾಗಿ ಹಿಂದೂ ದೇಶದ ಮುಂದಿನ ಭದ್ರತೆಯ ದೃಷ್ಟಿಯಿಂದ ತೈಲೇಂಡಿನ ಗಡಿಯಲ್ಲಿ ಸ್ವಲ್ಪವಾದರೂ ಬದಲಾವಣೆಗಳಾಗಬೇಕು. ತೈಲೇಂಡಿನ ಒಳಗೆ ವಿಮಾನ ನಿಲ್ದಾಣ ಮೊದಲಾದುವುಗಳನ್ನು, ಮಿಲಿಟರಿ ದೃಷ್ಟಿಯು ಮತ್ತಿತರ ಅನುಕೂಲತೆಗಳನ್ನು ಬ್ರಿಟಿಷರಿಗೆ ಬಿಡಬೇಕು ಎಂಬುವುದು ಬ್ರಿಟಿಷರ ಅಭಿಪ್ರಾಯವಿರುವಂತೆ ಕಂಡು ಬರುತ್ತದೆ. ಜಪಾನರ ವಿರುದ್ಧವಿದ್ದ ತೈಲೇಂಡಿನ ಅಧಿಕಾರಿಗಳು, ಜಪಾನರಿಂದ ತೈಲೇಂಡು ಆಕ್ರಮಿಸಲ್ಪಡುವ ಕಾಲಕ್ಕೆ ಬಹುದೊಡ್ಡ ಧನ ಸಂಚಯವನ್ನು ನ್ಯೂಯೊರ್ಕಿನ ಮತ್ತು ಲಂಡನಿನ ಬೇಂಕುಗಳಲ್ಲಿ ಇಟ್ಟಿದ್ದಾರೆ. ನ್ಯೂಯೊರ್ಕಿನ ಅಂತರಿಕಾದ ಬ್ಯಾಂಕುಗಳು ಈ ನಿಕ್ಷೇಪವನ್ನು ಬೇಕಾದಾಗ ಪ್ರಚಾರ ಮೊದಲಾದ ಕಾರ್ಯಗಳಿಗೆ ವಾಪಸು ತೆಗೆಯುವ ಅನುಕೂಲತೆ ಕೊಟ್ಟಿದ್ದರೆ ಬ್ರಿಟಿಷರು ಲಂಡನಿನ ನಿಧಿಯನ್ನು ಭದ್ರಮುಷ್ಠಿಯಲ್ಲಿಟ್ಟುಕೊಂಡಿದೆ. ಇದರಿಂದ ಸ್ವಾಭಾವಿಕವಾಗಿ ಬ್ರಿಟಿಷರ ಬಗ್ಗೆ ತೈಲೇಂಡಿನವರಲ್ಲಿ ದ್ವೇಶ ಹುಟ್ಟಿದೆ. ಯುದ್ಧದಲ್ಲಿ ಅನೇಕ ತರದ ನಷ್ಟ ಪಟ್ಟು ಅನೇಕರು ಅನೇಕ ರೀತಿಯಲ್ಲಿ ಬುದ್ಧಿ ಕಲಿತಿದ್ದರೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಪರಕೀಯರನ್ನು ಶೋಷಿಸುವ ತನ್ನ ಹಳೆಯ ಬುದ್ಧಿಯಲ್ಲಿಯೇ ಇದೆ.

ಯೂರೋಪಿನ ಒಂದು ರಾಷ್ಟ್ರವನ್ನು ತನ್ನ ಸಂತೆಯಾಗಿ ಮಾಡಿಕೊಳ್ಳುವದು ಯಾರಿಂದಲೂ ಸಾಧ್ಯವಿಲ್ಲ ಬ್ರಿಟನಾದರೂ ಈ ಬಗ್ಗೆ ಹತ್ತುಸಾರಿ ಹಿಂದುಮುಂದು ಆಲೋಚನೆಮಾಡಬೇಕಾಗುವದೆಂದು ಹಲವರು ಊಹಿಸಿದ್ದರು. ಅದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಇಂದು ಹಿಂದಿನದಕ್ಕಿಂತಲೂ ತನ್ನ ಸಾಮ್ರಾಜ್ಯಲಾಲಸೆಯನ್ನು ಹೆಚ್ಚಿಸಿಕೊಂಡಿರುವಂತೆ ಕಂಡುಬರುತ್ತದೆ. ಇಟೆಲಿಯ ಬಗ್ಗೆ ಅಮೇರಿಕಾ ಬ್ರಿಟನುಗಳಲ್ಲಿ ಭಿನ್ನಾಭಿಪ್ರಾಯ ಬಂದಿದೆ. ಇಟೆಲಿಯಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸಲು ಬಿಡದೆ ಅದನ್ನು ಕೇವಲ ಸಂತೆಯಾಗಿ ಮಾಡಿಕೊಂಡು ಮುಂದೆ ಅದು ಹಡಗು ಪಡೆಕಟ್ಟೆ, ಸೈನ್ಯಸಿದ್ಧತೆಗಳನ್ನು ಮಾಡಿಕೊಂಡು ಪ್ರಥಮವರ್ಗದ ರಾಷ್ಟ್ರವಾಗಬಾರದೆಂದು ಬ್ರಿಟಿನಿನ ಅಭಿಪ್ರಾಯ. ಯುದ್ಧದಲ್ಲಿ ನಷ್ಟಹೊಂದಿ ಭೂಶಾಯಿಯಾಗಿ ಬಿದ್ದಿರುವ ಇಟೆಲಿಯನ್ನು ಕೈಹಿಡಿದೆತ್ತಿ ನಿಲ್ಲಿಸಿ ಹಿಂದಿನಂತೆ ತನ್ನ ಶಕ್ತಿ ಚೈತನ್ಯಗಳನ್ನು ಹೆಚ್ಚಿಸಿಕೊಳ್ಳಲು ಸಹಾಯಮಾಡಬೇಕೆಂಬುದು ಅಮೇರಿಕನರ ಮನೀಶೆ. ಯುದ್ಧದಲ್ಲಿ ಜಯದ ಬೆಳಕು ಕಂಡುಬರುವದಲ್ಲ. ವಿಜಯ ಮಾರ್ಗವು ಗೋಚರವಾಗಿದೆ ಅಷ್ಟೆ. ಪೂರ್ಣ ಜಯದೊರೆಯಬೇಕಾದರೆ ಆ ಮಾರ್ಗದಲ್ಲಿ ಇನ್ನೂ ಬಹುದೂರ ಸಾಗಬೇಕಿದೆ. ಲಕ್ಷಾಂತರ ಜನರ ಬಲಿದಾನಮಾಡಬೇಕಿದೆ. ಹೀಗೆ ವಿಜಯದ ಗಡಿಯನ್ನು ಮುಟ್ಟಲು ಅಡ್ಡವಾಗಿ ದೊಡ್ಡ ಕಾರ್ಯವೇರುವೇ ಇದ್ದರೂ ಮಿತ್ರರು ಈಗಲೇ ಭೂಶಾಯಿಯಾದ, ತಮ್ಮ ಹಿಡಿತಕ್ಕೆ ಬಂದ ರಾಷ್ಟ್ರಗಳ ಬಗ್ಗೆ ತಮ್ಮ ಸ್ವಾರ್ಥಹಿತವನ್ನು ಸಾಧಿಸುವ ಧೋರಣೆತಳೆದಿರುವದು ವಿಶಾದದ ಸಂಗತಿ. ಪ್ರಜಾಪ್ರಭುತ್ವಕ್ಕಾಗಿ ನಡೆಯುತ್ತಿರುವ ಯುದ್ಧ! ಆದರೆ ಕಾರ್ಯಾಚರಣೆಯಲ್ಲಿ ಇದೇ ತತ್ವದ ಕೊಲೆ!

ಇಟೆಲಿ, ತೈಲೇಂಡುಗಳ ಬಗ್ಗೆ ಈ ನೀತಿಯನ್ನು ವ್ಯಕ್ತಮಾಡಿದ ಬ್ರಿಟನು ಭಾರತದ ಬಗ್ಗೆ ಹೇಗೆ ವರ್ತಿಸೀತು? ಭವಿಷ್ಯವನ್ನು ನೆನೆದರೆ ಕಣ್ಣಿಗೆ ಕತ್ತಲೆ ಬರುತ್ತದೆ. ನಿರಾಶೆಯ ತಿಮಿರವು ಸರ್ವದಿಶೆಗಳಲ್ಲೂ ಕಂಡುಬರುತ್ತಿದೆ.

ಒಳ ದೇ ಶ.

ಕೊಡಗು ಪಬ್ಲಿಕ್ ಸರ್ವೆಂಟ್ಸ್ ಸಹಕಾರ ಸ್ಟೋರಿನ ವಿಟಂಗು ತಾ. 30-9-44 ರಲ್ಲಿ ಅಪರಾಹ್ನ 4 ಗಂಟೆಗೆ ಮಡಿಕೇರಿಯಲ್ಲಿ ಜರಗುವದು.

ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ. ಸಿ. ಎಂ. ರಾಮರಾಯರು ಕೊಡಗು ಉಪಾಧ್ಯಾಯರ ಸಂಸ್ಥೆಗೆ ರೂ. 250 ದಾನವೂಡಿ ಪ್ರತಿವರ್ಷ ಇದರ ಬಡ್ಡಿಯಿಂದ, ಕೊಡಗು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ಬರುವ ವಿದ್ಯಾರ್ಥಿಗೆ ರಾಮರಾವ್ ಮೆಡಲೆಂದು ಬಹುಮಾನ ಕೊಡಲು ಏರ್ಪಡಿಸಿರುವರೆಂದು ತಿಳಿಯಬರುತ್ತದೆ.

ಮಿಸೆಸ್ ಇಟ್ಟರ ಚಂಗಪ್ಪನವರು ಕೊಡಗು ವಿದ್ಯಾನಿಧಿಗೆ ರೂ. 500 ಕೊಟ್ಟು ಜೀವಾವಧಿ ಸದಸ್ಯರಾಗಿರುವರು.

ಬೊಂಬಾಯಿ ಕೊಡವ ಸಂಘದ ವರು ತಾ. 3ರಲ್ಲಿ ಕೈಲುಕೊಳ್ದು ಹಬ್ಬವೆನ್ನು ಆಟೋಟಗಳ ಸ್ಪರ್ಧೆಯೊಡನೆ ವಿಜೃಂಭಣೆಯಿಂದ ಮಿಸೆಸ್ ಚೆಪ್ಪುಡೀರ ಪೊನ್ನಪ್ಪನವರ ಭವನದಲ್ಲಿ ಆಚರಿಸಿದರು. ಸ್ಪರ್ಧೆಯಲ್ಲಿ ಗೆದ್ದವರಿಗೆ ಮಿಸೆಸ್ ಪುನೆಯಪಂಡ ಚಿಣ್ಣಪ್ಪನವರು ಬಹುಮಾನಗಳನ್ನು ಹಂಚಿದರು.

ಪತ್ಯವುಸ್ತಕವನ್ನು ನಿಶ್ಚಿತ ಬೆಲೆಗಿಂಥಾ ಹೆಚ್ಚಿನ ಕ್ರಯಕ್ಕೆ ಮಾರಿದುದರಿಂದ ಮಡಿಕೇರಿಯ ಶ್ರೀ ಚಕ್ರಪಾಣಿ ಶೆಟ್ಟಿಯವರಿಗೆ ರೂ. 200 ಜುಲ್ಮಾನೆ ವಿಧಿಸಲಾಗಿದೆ.

ಸರಿಯಾದ ರೀತಿಯಲ್ಲಿ ಬೆಲೆ ನಿಯಂತ್ರಣ ಪಟ್ಟಿಯನ್ನು ಇಡಲಿಲ್ಲವೆಂದು ಶ್ರೀ ನೆರವಂಡ ಉತ್ತಪ್ಪನವರಿಗೆ ರೂ. 30 ಜುಲ್ಮಾನೆ ವಿಧಿಸಲಾಗಿದೆ.

ನಿಯಂತ್ರಿಸಿದ ಸಾಮಾನುಗಳನ್ನು ತರಿಸಲಿಕ್ಕೆ, ಅಂಥಾ ಸಾಮಾನುಗಳನ್ನು ಹೊರಗೆ ಕಳುಹಿಸಲಿಕ್ಕೆ ಕೂಪನುಗಳಿಗೂ, ಪರ್ಮಿಟ್ಟುಗಳಿಗೂ ಪರ್ಸನಲ್ ಅಸಿಸ್ಟೆಂಟರ ಬದಲು ಅಹಾರ ಪದಾರ್ಥಗಳ ಚೀಫ್ ಇನ್ಸ್‌ಪೆಕ್ಟರಿಗೆ ಬರೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಕೊಡಗಿನ ಶಾಖೆಯ ಮಹಾಸಭೆಯು ಈ ದಿನ ಮಡಿಕೇರಿಯಲ್ಲಿ ನಡೆಯುವದು.

ಯುದ್ಧಾನಂತರ ಪುನರ್ರಚನೆಯ ಸಮಿತಿಯ ಕಾರ್ಯದರ್ಶಿಗಳಾಗಿ ಉತ್ತರ ಕೊಡಗಿನ ಮುನ್ಸೀಫರಾದ ಶ್ರೀ ಐಜೆಟ್ಟಿರ ಸಚ್ಚಯ್ಯನವರನ್ನು ನೇಮಿಸಲಾಗಿದೆ.

ಮಡಿಕೇರಿಯಲ್ಲಿ ಪ್ಲೇಗು ಹಬ್ಬುತ್ತಲೇ ಇದೆ. ಹದಿನೈದು ಜನರಿಗೆ ಈ ಪರೆಗೆ ಆಗಿದೆ. ಇಬ್ಬರು ಮೃತರಾಗಿರುವರು. ಸಿಡುಬು ಐದು ಜನರಿಗೆ ಆಗಿದೆ. ಈ ವಾರದಿಂದ ರಾಜಾಸೀಟನಲ್ಲಿ ಸಂತೆ ಏರ್ಪಡಿಸಲಾಗಿದೆ.

ಗಾಂಧಿ ಜಯಂತಿಯ ಬಗ್ಗೆ ವೀರಾಜಪೇಟೆಯಲ್ಲಿ ಅಕ್ಟೋಬರ್ ತಾ 2 ರ ಸಾಯಂಕಾಲ 5½ ಗಂಟೆಯಿಂದ ನೂಲುವ ಸ್ಪರ್ಧೆ, ಹಿಂದೀ ಡಿಕ್ಲೇಶನ್, ನೂಲಿನ ಪ್ರದರ್ಶನ ಮೊದಲಾದುವು ಜರಿಯುವುದು. ಪಿ ಐ. ಶ್ರೀ ಬೆಳ್ಯಪ್ಪನವರು ಅಧ್ಯಕ್ಷತೆ ವಹಿಸುವರು.

ಇಂಡಿಯಾ ಸರಕಾರದವರು ಹಲ್ಲು ತಿಕ್ಕುವ ಬ್ರಸ್ಸು, ಪೇಸ್ಟ್, ಮತ್ತು ಪುಡಿಗಳ ಮತ್ತು ಇತರೆ ಟಾಯಿಲೆಟ್ ಸಾಮಾನುಗಳ ಬೆಲೆಯನ್ನು ಬೈಸಿಕಲ್ಲು ಮತ್ತು ಅದರ ಭಾಗಗಳ ಕ್ರಯವನ್ನು ನಿರುಕುಮಾಡಿರುವದನ್ನು ಕೊಡಗಿನ ಸರಕಾರದವರು ಗಜೆಟಿನಲ್ಲಿ ಪ್ರಕಟಿಸಿರುವರು.

ಸೆಂಟ್ರಲ್ ಎಕ್ಸಯಿಸಿನ ಸಿಬ್ಬಂದಿಗೆ ಉಮೇದುವಾರರನ್ನು ಕೊಡಗಿನಿಂದ ಚುನಾಯಿಸಲು ಮದ್ರಾಸು ಪ್ರಾಂತದ ಎಕ್ಸಯಿಸ್ ಕಮಿಷನರು 16-9-44 ರಲ್ಲಿ ಮಡಿಕೇರಿಗೆ ಬಂದು ಕೆಲವು ಜನ ಇನ್ಸ್‌ಪೆಕ್ಟರುಗಳನ್ನು ನೇಮಿಸಿರುವರು.

ಕೂಲಿಗಾರರ ಸ್ಥಿತಿಗತಿಗಳನ್ನು ಪರಿಶೀಲಿಸಲು ಇಂಡಿಯಾ ಸರಕಾರದಿಂದ ನೇಮಿತವಾಗಿರುವ ಸಮಿತಿಯ ಚೇರ್‌ಮೇನರು ಕೊಡಗಿಗೆ ಇಂದು ತಾ. 25-9-44 ರಲ್ಲಿ ಇಂಡಿಯನ್ ಪ್ಲಾಂಟರುಗಳ ಪ್ರತಿನಿಧಿಗಳನ್ನು ಭೇಟಮಾಡುವರು.

ಈ ತಾ. 16 ರ ರಾತ್ರಿ ಮೈಸೂರಿನಲ್ಲಿ ಶ್ರೀ ನಡಿಕೇರಿಯಂಡ ನಂಜಿಪ್ಪನವರೂ ತಾ. 17ರಲ್ಲಿ ಹಲವು ವರ್ಷಗಳಿಂದ ಪೆನ್ಶನ್ ಪಡೆಯುತ್ತಿದ್ದ ಬೆಳ್ಯಪ್ಪರು ಗ್ರಾಮದ ರಿಟಯರ್ಡ್ ಪಾರುಪತ್ಯಗಾರರಾದ ಶ್ರೀ ಇಟ್ಟರ ಪೊನ್ನಪ್ಪನವರೂ ಶಿವೈಕ್ಯರಾದರು.

ಸಾರ್ವಜನಿಕ ಸಭೆಗಳು.

ಈ ತಾ. 18 ರಲ್ಲಿ ನಾಪೋಕ್ಲಿನಲ್ಲಿ ಶ್ರೀ ಆರೆಯಡ ಸಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿ, ವ್ಯವಸಾಯದ ವೆಚ್ಚವು ವಿಪರೀತ ಏರಿರುವ ಕಾರಣ ಭತ್ತದ ಬೆಲೆಯನ್ನು ಗಾಡಿಗೆ ರೂ. 115 ರಿಂದ ರೂ. 150 ಕ್ಕಾದರೂ ಏರಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಿ, ಈ ಸಂಬಂಧ ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಲು ಶ್ರೀ ಬಿದ್ದಂಡ ಕಾರ್ಯಪ್ಪನವರನ್ನು ಆರಿಸಲಾಯಿತು.

ತಾ. 21 ರಲ್ಲಿ ಭಾಗಮಂಡಲದಲ್ಲಿ ಶ್ರೀ ಟಿ. ರಮಣಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ಮೀಟಿಂಗಿನಲ್ಲೂ ಇದೇ ತರಹದ ತೀರ್ಮಾನವಾಗಿ, ಶ್ರೀ ಕೆದಂಬಾಡಿ ಗಣಪತ್ತಿಯವರನ್ನು ಪ್ರತಿನಿಧಿಯಾಗಿ ಚುನಾಯಿಸಲಾಯಿತು.

ರಣಭೇರಿ.

—೦೦—

'ನಮಗೆ ಶತ್ರುವೂ ಇಲ್ಲದೆ ಶರಣಾಗತನಾಗುವವರೇ ಜರ್ಮನಿಯು ಉಳಿಯಲು ಇರುವ ಮಾರ್ಗ' ಎಂಬ ದಾಗಿ ಅಮೇರಿಕದ ಉಪಾಧ್ಯಕ್ಷರಾದ ಸಂಪ್ರತಿನ್ರಿವಾಲೇಸರು ಹೇಳಿದರು. ಈ ಅಭಿಪ್ರಾಯವು ಇಂದು ಹಲವರಿಂದ ವ್ಯಕ್ತಮಾಡಲ್ಪಡುತ್ತಿದೆ. ಜರ್ಮನಿಯು ಸೋತು ಹಿನ್ನಡೆದಿದೆ. ಕಡೆಯ ವರೆಗೆ ಹೋರಾಡಿ ಅಸಂಖ್ಯ ನಷ್ಟವಾಡಿಕೊಳ್ಳುವವರ ಬದಲು ಮಿತ್ರರಿಗೆ ಶರಣಾಗತರಾಗಿ ಜೀವಉಳಿಸಿಕೊಳ್ಳುವದು ಯೋಗ್ಯವೆಂದು ಅಭಿಪ್ರಾಯಗಳು ಹಬ್ಬಿವೆ. ಆದರೆ ಇದು ಸಾಧ್ಯವೇ? ಯಾರಿಗೂ ಈ ವರೆಗೆ ಶಿರಬಾಗದೆ ಎದೆಯನ್ನು ಮುಂದೆ ಮಾಡಿಕೊಂಡು ಗಂಭೀರವಾಗಿ ವರ್ತಿಸಿದ ಜರ್ಮನಿಯು ಮಿತ್ರರ ಮುಂದೆ ನೆಲಮುಟ್ಟಿ ಬಗ್ಗಲಾಪುದೇ? ಯಾಕೆಂದರೆ ಪ್ರತಿಯೊಬ್ಬನಿಗೂ ಸ್ವಾಭಿಮಾನವೆಂಬುದಿದೆ. ಅದನ್ನು ಎಷ್ಟೇ ಕಷ್ಟಬಂದರೂ ಬಿಟ್ಟುಕೊಟ್ಟು ವರ್ತಿಸಲಾರನು.

ದಿನಗಳು ಕಳೆದಂತೆ ಜರ್ಮನ್ ಪಕ್ಷದಲ್ಲಿದ್ದವರು ಅವರ ಕೈಬಿಡಕೊಡಗಿದ್ದಾರೆ. ಅಷ್ಟೇ ಅಲ್ಲ; ಜರ್ಮನಿಯು ಪೋಲೆಂಡಿಯುದ್ಧವನ್ನೂ ಹೂಡಿವೆ. ಇಷ್ಟರ ವರೆಗೆ ಸ್ನೇಹಿತನಂತಿದ್ದ ಫಿನ್ಲೆಂಡೂ ಸಹ ಜರ್ಮನಿಯ ಮೇಲೆ ಯುದ್ಧ ಸಾರಿದೆಯಂತೆ.

ಜರ್ಮನಿಯತ್ತ ಹರಿಯುತ್ತಿರುವ ಮಿತ್ರಸೇನಾಪ್ರವಾಹವು ಒಂದನ್ನೊಂದು ಹೊಂದಿಕೊಂಡು ಅಖಂಡವಾಗಿ ಮುಂದರಿಯುತ್ತಿದೆ. ಹಿಟ್ಲರನು ಈ ವರೆಗೆ ತನ್ನ ಸೇನೆಗಳನ್ನು ಹಿಂದಕ್ಕೆ ತೆಗೆಯುತ್ತಾ ಬಂದು ತನ್ನ ಅಖಂಡವಾದ 'ಸೀಜ್‌ಫ್ರೈಡ್' ಕೋಟೆಯ ಹಿನ್ನೆಲೆಯಲ್ಲಿ ನಿಂತಿದ್ದಾನೆ. ಮಿತ್ರರು ಈ ಗೋಡೆಯ ಹೊರ ಆವರಣವನ್ನು ಛೇದಿಸಿರುವರಂತೆ. ಒಂದೆಡೆಯಲ್ಲಿ ಒಳಗೂ ನುಗ್ಗಿದ್ದಾರೆ. ಎಂದೂ ವಾರ್ತೆ. ಆದರೂ ಈ ಕೋಟೆಯು ನಿಷ್ಪಯೋಜಕವಾಗಿಲ್ಲ. ಇನ್ನೂ ಬಲವಾಗಿಯೇ ಇದೆ. ಹಿಟ್ಲರನ್ನು ಇನ್ನೂ ಕೆಲವು ಕಾಲ ಹೀಗೆ ಹಿಂತೆಗೆದುಕೊಂಡು ಮಿತ್ರರನ್ನು ಅಲ್ಲಲ್ಲಿ ಕಿಡಿದು ಯುದ್ಧದ ಚೀರ್ಮಾನದ ದಿನವನ್ನು ಮುಂದೂಡಬಹುದು. ಆಗ ಅದು ತೀರಾ ಗಂಡಾಂತರ ಕಾರಕವಾದುದು. ಹಿಟ್ಲರನು ತಾನು ಹಿಂತೆಗೆದುಕೊಳ್ಳುವ ಯೋಜನೆಯನ್ನು ಒಪ್ಪಿ ಆ ರೀತಿ ಮಾಡುತ್ತಾ ಬಂದುದೇ ತನ್ನ ಇಂದಿನ ಅಪಾಯಕರ ಪರಿಸ್ಥಿತಿಗೆ ಕಾರಣವೆಂದು ಹಲವು ಯುದ್ಧ ಕಾರ್ಯವಿಚಾರಪರರು ಹೇಳುತ್ತಿದ್ದಾರೆ. ಹಿಂತೆಗೆಯುತ್ತಾ ಬಂದು ತನ್ನ ಮಾತೃಭೂವಿಯೊಳಗೇ ಶತ್ರುವು ಸೇರಿರುವಾಗ ಇನ್ನೂ ಹಿಂತೆಗೆದುಕೊಳ್ಳುವದು ಆತ್ಮಘಾತಕವಾಗಿದೆ. ಜರ್ಮನಿಯು ಈ ಹಿಂತೆಗೆದುಕೊಳ್ಳುವದಿಲ್ಲಿಗೆ? ಬಿದ್ದರಿಂದ ಹಿಟ್ಲರನು ತನ್ನ ಕಡೇಯುದ್ಧಸನ್ನು ಇಲ್ಲಿ ಮಾಡಲೆಂದೇ ಕಿದೆ. ಈ ಯುದ್ಧವು ಅಂತಿಮ ಯುದ್ಧವಷ್ಟೇ ಅಲ್ಲಿ; ಬಹು ಕರ್ಕಶವಾದ ಯುದ್ಧವೂ ಆಗುವದು.

ಈ ಸಂದರ್ಭದಲ್ಲಿ ಕಳೆದ ಮಹಾಯುದ್ಧದ ಅಂತಿಮಘಟ್ಟವನ್ನೂ, ಇಂದಿನ ಕಡೇ ಚಿತ್ರಣವನ್ನೂ ಹೋಲಿಸಿ ನೋಡಿದರೆ ಜರ್ಮನಿಯು ಕಳೆದ ಯುದ್ಧದಲ್ಲಿದ್ದದಕ್ಕಿಂತಲೂ ನಿರ್ಬಲವಾಗಿದೆಯೇ ಎಂಬ ಶಂಕೆ ಹುಟ್ಟುವದುಂಟು. ಕಳೆದ ಯುದ್ಧದಲ್ಲಿ ಇಂದಿನ ರೀತಿಯಂತೆ ಜರ್ಮನರು ತಂಡತಂಡವಾಗಿ ಶರಣಾಗತರಾಗಿರಲಿಲ್ಲ. 1939ರ ಕಾಲಕ್ಕೆ ಇಡೀ ಜಗತ್ತನ್ನು ಜಯಿಸುವ ಹುಮ್ಮಸ್ಸಿನಿಂದ ರಣರಂಗಕ್ಕಿಳಿದ ಯೋಧರಲ್ಲಿ ಎಷ್ಟು ಜನರು ಜೀವಂತ ವಿದ್ದಾರೋ ಬಲ್ಲವರಾರು? ಈಗ ಅವರ ಬದಲು ಇರುವ ಯೋಧರಲ್ಲಿ ಅದೇ ಹುರುಪು, ಹುಮ್ಮಸ್ಸು ಇದೆಯೆಂದು ಹೇಳಬಲ್ಲವರಾರು? 1918ರಲ್ಲಿ ಜರ್ಮನಿಯನ್ನು ಈಗ ತೊಂಪರೆಗೀಡು ಮಾಡಿರುವ ರಷ್ಯಾದ ಸೇನೆಯಿಂಲಲ್ಲ. ಪೂರ್ವಭಾಗದಿಂದ ಅದಕ್ಕೆ ಯಾವ ಗೊಂದಲವೂ ಇರಲಿಲ್ಲ. ಆದರೆ ಇಂದು ಇಕ್ಕಡೆಯಲ್ಲಿಯೂ ಶತ್ರು ಪ್ರಹಾರಗಳಿಂದ ತಾಡಿತವಾಗಿ ಜರ್ಮನಿಯು ಜರ್ಝರಿತವಾಗತೊಡಗಿದೆ. 1918ರಲ್ಲಿ ಜರ್ಮನಿಗೆ ಈಗಿರುವಷ್ಟು ಶತ್ರುಗಳೂ ಇರಲಿಲ್ಲ. ಈಗ ತನ್ನ ಅಂಕಿತದಲ್ಲಿರುವವರೇ ಶತ್ರುಗಳಾಗತೊಡಗಿದ್ದಾರೆ. 'ಶನಿಬಂದು ಹಿಡಿದಾಗ ನೆಲವೆದ್ದು ಬಡಿಯುವದು' ಎಂಬ ಸರ್ವಜ್ಞನ ನುಡಿಯಂತೆ ಜರ್ಮನಿಗೆ ಇಂದು ಮಿತ್ರರು ಶತ್ರುಗಳಾಗತೊಡಗಿದ್ದಾರೆ. ಲೌಕಿಕ, ಸೈನಿಕ ದೃಷ್ಟಿಗಳಿಂದ ಜರ್ಮನಿಯು ಅಗ ಈಗಿನ ಸ್ಥಿತಿಗಿಂತಲೂ ಉತ್ತಮವಾಗಿತ್ತು. ಆದರೂ ಅಪಜಯವು ತಪ್ಪಲಿಲ್ಲ. ಆದರೆ ಇಂದು ಜರ್ಮನಿಯ ಸ್ಥಿತಿ ಚಿಂತಾಜನಕವಿದೆಯೆಂದು ವರದಿಗಳು ಹೇಳುತ್ತವೆ. ದೇಶದೊಳಗೇ ಆಂತರ್ಕಲಹಗಳಾಗುತ್ತಿವೆಯೆಂದೂ ವರದಿಗಳಿವೆ. ಹಿಟ್ಲರನು ಕಳೆದ ಮಹಾಯುದ್ಧದ ಜರ್ಮನ್ ನಾಯಕರಾದ ಹಿಂಡೆನ್‌ಬರ್ಗ್ ಯೂ ಲ್ಯೂಡೆನ್‌ಡ್ರಾಫ್‌ರಿಗಿಂತಲೂ ಚತುರನು. ದೇಶದೊಳಗಣ ದಂಗೆಯನ್ನು ಅಡಗಿಸಿ ಸರಿಪಡಿಸಿಕೊಂಡಿದ್ದಾನೆ. ದೇಶದೊಳಗೆ ಶಿಸ್ತನ್ನು ತಂದು ನಾಝಿ ಸೈನ್ಯಗಳನ್ನು ವಿಕೇಂದ್ರೀಕರಿಸಿದ್ದಾನೆ. ಆದ್ದರಿಂದ ನಿರಾಶೆಯಿಂದ ಜರ್ಮನಿಯು ಶರಣಾಗತವಾಗಲಾರದು. ಜರ್ಮನ್ ಗಡಿಯು ಮಿತ್ರರ ಪ್ರಹಾರಗಳಿಗೆ ಸುಲಭದಲ್ಲಿ ದಾರಿಕೊಡದು. ಜರ್ಮನರು ಕಚ್ಚೆದೆಯಿಂದ ಮಿತ್ರರನ್ನು ತಮ್ಮ ಈ ಕಡೇ ಯುದ್ಧದಲ್ಲಿ ಎದುರಿಸದಿರರು.

ಇಂದು ಯುದ್ಧ ಜರ್ಮನಿಯೊಳಗೆ ನಡೆಯುತ್ತಿದೆ. ಜರ್ಮನರ ಹೊಸ ಗುಪ್ತಾಸ್ತ್ರಗಳಾವುವೂ ಇನ್ನೂ ಹೊರಬಿದ್ದಿರುವದಿಲ್ಲ. ಈ ಕಡೆಯಿಂದ ಐದು ಮಾರ್ಗಗಳ ಮೂಲಕ ಮಿತ್ರರು ಜರ್ಮನಿಯೊಳಗೆ ನುಗ್ಗಲು ಏರ್ಪಾಡು ಮಾಡುತ್ತಿದ್ದಾರೆ. 'ಮಿತ್ರರು ಜರ್ಮನಿಯೊಳಕ್ಕೆ ನುಗ್ಗಿ ಬಂದರೆ ಪ್ರತಿಯೊಂದು ಮನೆಯನ್ನು ಸುಟ್ಟುಹಾಕಲಾಗುವದು, ಪ್ರತಿಯೊಂದು ರಸ್ತೆಯನ್ನು ನಾಶಮಾಡಲಾಗುವದು, ಮೃತ್ಯುವು ಅವರನ್ನು ಸ್ವಾಗತಿಸುವಂತೆ ಮಾಡಲಾಗುವದು' ಎಂದು ಜರ್ಮನರು ಪ್ರಚಾರಮಾಡುತ್ತಿದ್ದಾರೆ. ಈ ರೀತಿ ತಮ್ಮ ಸ್ವಂತ ಆಸ್ಥಿಯನ್ನು ಜರ್ಮನರು ನಾಶಮಾಡತೊಡಗಿದರೆ ಮುಂದೆ ಆವರಿಗೆ ವಿಪರೀತ ಕಷ್ಟಗಳು ಬಾರದಿರಲಿಕ್ಕೆ. ಅವರಿಗೆ ಬೇಕಾದ ಸರಬರಾಯಿ, ಆಹಾರಸಾಮಗ್ರಿಗಳು ಬರುವದೆಲ್ಲಿಂದ? ಈ ನೀತಿಯಿಂದ ಜರ್ಮನಿಯು ಸಂಕುಚಿತವಾಗುತ್ತಾ ನಾಶವಾಗಬಹುದು.

ಇತ್ತ ಪೂರ್ವದಲ್ಲಿ ರಷ್ಯನರು ನಾಲ್ಕು ಮಾರ್ಗಗಳಲ್ಲಿ ಜರ್ಮನಿಯೊಳಗನುಗ್ಗಲು ಯತ್ನಿಸುತ್ತಿದ್ದಾರೆ. ಪೂರ್ವ ಪ್ರಶ್ಯಾದಲ್ಲಿ ಜರ್ಮನರ ಪ್ರತಿಭಟನೆ ಅತೀ ತೀವ್ರವಾದುದರಿಂದ ರಷ್ಯನರು ಆ ಭಾಗವನ್ನು ಬಿಟ್ಟು ಸ್ವಲ್ಪ ದಕ್ಷಿಣಕ್ಕೆ ಬಂದಿರುವರು. ರಷ್ಯಾಸೇನೆಗಳು ಪೋಲೆಂಡಿನಿಂದ ಕೆಳಗಿಳಿದು ಝುಕೊಸ್ಲೋವೇಕಿಯಾಕ್ಕೆ ನುಗ್ಗುವ ಏರ್ಪಾಡು ಮಾಡುತ್ತಿರುವರು. ಹೀಗೆ ಮಾಡುವದು ಜರ್ಮನರಿಗೆ ಗಂಡಾಂತರಕಾರಿಕವಾಗಿದೆ. ರಷ್ಯನರಿಗೂ ಇದು ಸುರಕ್ಷಿತ ಮಾರ್ಗವಲ್ಲ ಹೇಗೂ ಜರ್ಮನಿಯ ಸುತ್ತಲೂ ಯುದ್ಧದ ಜ್ವಾಲೆಹತ್ತಿಕೊಂಡು ಕ್ರಮೇಣ ಜರ್ಮನಿಯ ಹೃದಯಕೋಶದ ಹತ್ತಿರ ಹತ್ತಿರ ಬರತೊಡಗಿದೆ.

ಯೂರೋಪಿನ ಯುದ್ಧದ ಕೊನೆ ಅಂಕವು ಈ ರೀತಿ ನಡೆಯುತ್ತಿದ್ದರೆ ಇತ್ತ ಪೂರ್ವದಲ್ಲಿ ಜಪಾನಿನ ಮೇಲಿನ ಯುದ್ಧದ ಪೂರ್ವಾಂಕದ ಸಿದ್ಧತೆಗಳಾಗುತ್ತಿವೆ. ಅಮೇರಿಕನರು ಫಿಲಿಫೈನಿನ ಮೇಲೆ ದೊಡ್ಡ ಪ್ರಮಾಣದಿಂದ ದಾಳಿಯುದ್ಧ ಹೂಡುವ ಏರ್ಪಾಡು ಮಾಡುತ್ತಿದ್ದಾರೆ. ಈ ವರೆಗೆ ಈ ಭಾಗದ ಯುದ್ಧವು ವಿಶಾಲ ರೀತಿಯಿಂದ ನಡೆದೇ ಇಲ್ಲ. ಈ ಧಾಳಿಯ ವಿಚಾರ ವಿನಿಮಯಮಾಡಲು ಚರ್ಚಿಲ್ ಮತ್ತು ರೂಸ್‌ವೆಲ್ಟರು ಕ್ಯೂಬೆಕ್‌ನಲ್ಲಿ ಸೇರಿರುವರು. ಜಪಾನನ್ನು ಮುರಿಯುವ ಭಾರವು ಹೆಚ್ಚಾಗಿ ಅಮೇರಿಕನರ ಮೇಲೆ ಬೀಳಬಹುದಾದ್ದರಿಂದ ಈ ಭಾಗದ ಯೋಜನೆಗಳೆಲ್ಲವೂ ರೂಸ್ವೆಲ್ಟರ ಅಭಿಪ್ರಾಯದಂತೆ ನಡೆಯಬಹುದು.

ನಿಮ್ಮ ದಿನನಿತ್ಯದ ಉಪಯೋಗಕ್ಕೆ ಉತ್ತಮೋತ್ತಮ ವಾದ

ಪರಿಮಳವುಳ್ಳ
—ಶಾರದಾ—
ಕಾಫಿ ಪುಡಿ

ಇದನ್ನೇ ಉಪಯೋಗಿಸಿರಿ.

ಕಾಫಿ ಪುಡಿಗಳಲ್ಲಿ ತಿಲಕಪ್ರಾಯವಾದ್ದು.

SHRI SHARADA COFFEE HOME,
McDOWELLS BUILDINGS, *MERCARA.*

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀಮಾನ್ & ಶ್ರೀಮತಿ ಪಟ್ಟಮಾಡ ಎನ್. ಅಪ್ಪಣ್ಣನವರು	51
ಡಾ. ಕೊಂಗಂಡ ಎ. ಅಕ್ಕಮ್ಮನವರು	50
,, ಚೀಂದ್ರಿಮಾಡ ಕೆ. ಅಪ್ಪಯ್ಯನವರು	25
ಶ್ರೀ ಬಡುವಂಡ ಗಣಪತಿಯವರು	25
ಮೂರ್ನಾಡು ಯೂನಿಯನ್ ಕಾನ್‌ಫರೆನ್ಸ್	15
ಶ್ರೀಮಾನ್ & ಶ್ರೀಮತಿ ಸೋಮೆಯಂಡ ಮುದ್ದಯ್ಯನವರು	10
ಶ್ರೀ ಮೂಕೆಟಿರ ದೇವದಪ್ಪನವರು	10
,, ಪಳಂಗಂಡ ಸಿ. ಕರುಂಬಯ್ಯನವರು	10
,, ಕೋಟೆರ ಐಯ್ಯಪ್ಪನವರು	10
ಮಿಸೆಸ್ ಕೊಂಗೆಟ್ಟಿರ ನಂಜಮ್ಮ, ಚಂಗಪ್ಪ ,,	10

5 ರೂ. ಕೊಟ್ಟವರು.

ಶ್ರೀ ಗಳಾದ ಕಾಟ್‌ಮಟತ್ ಖಾದರ್, ಸಿ. ಕೆ. ಅಬ್ದುಲ್ ಕುಟ್ಟಿ, ಟಿ. ಅಬ್ದುಲ್ಲ, ಕೊಡಗು ನಿವಾಸಿ, ಪಿ. ಎಸ್. ರಾಮಯ್ಯ, ದೇಶೀಯ, ಮಿಸೆಸ್ ಬಿದ್ದಂಡ ಮುತ್ತಣ್ಣ, ಕೆಗ್ಗಾಲು ಪಳಕೊಳ ಸಹಕಾರ ಸಂಘ, —ಇವರುಗಳು.

2 ರೂ. ಕೊಟ್ಟವರು.

ಶ್ರೀ ಗಳಾದ ಕಾಳ್ಯಮಾಡ ಗಣಪತಿ, ಮೂಟೆರ ಮುತ್ತಪ್ಪ, ಪುತ್ತೇರಿರ ನಂಜುಂಡ, ಮಿಸೆಸ್ ಹೆಚ್. ವೆಂಕಪ್ಪಯ್ಯ, ಕೇತಿಯಂಡ ಕರುಂಬಯ್ಯ ಗುಡ್ಡಂಡ ಭೀಮಯ್ಯ, ನಾಪನೆರವಂಡ ಅಚ್ಚಮ್ಮ, ಜಾರಿರ ಪೊನ್ನಪ್ಪ, ಮಿಸೆಸ್ ಬೊವ್ವೇರಿಯಂಡ ದೇವಕ್ಕಿ ಮುದ್ದಯ್ಯ, ಬಡುವಂಡ ಬೆಳ್ಯಪ್ಪ, ಜಾರಿರ ಎಂ. ಬೊಳ್ಳನ್ನ, ಕೊರವಂಡ ಮಂದಣ್ಣ —ಇವರುಗಳು. ಈ ಪರೆಗೆ ಒಟ್ಟು ರೂ. 9,495 ಜಮೆಯಾಗಿದೆ.

ಸೂಚನೆ—ಸ್ಥಳ ಸಂಕೋಚದ ಕಾರಣ ಉಳಿದ ಹೆಸರುಗಳನ್ನು ಬರುವ ವಾರ ಪ್ರಕಟಿಸಲಾಗುವುದು.

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಭೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂದು ನಾವೆಲ್ಲರೂ ಒಪ್ಪುತೇವೆ.

ವಿವರಗಳಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

1) ಪುತ್ತೂರು, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ

ಧಾತುವೃದ್ಧಿ ರಸಾಯನ [ZANDU]

"ರ್ಯಾಕ್ಫೋ—ಫಾಸ್ಫೋ—ಮೊಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಇತರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟಿರ್ ಪಾಸ್ಫೋಮೊಲ್ಟ್, ಹೆಮೋಗ್ಲೋಬಿನ್, ಸೋದಿಗ್ನಿ ಸರೊ ಫಾಸ್ಫೇಟ್ ಪೆಪ್ಸಿನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಷಾಪುಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

3) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

40) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕವ ರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ	೧೩,೪೪,೮೮,೦೦೦ ,,
	ಆಸ್ತಿ	೬,೩೦,೪೬,೦೦೦ ,,
	ಕಂಪೆನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು	೪,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜಮೂ ಬಂದ ಠೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಶಿತಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

"ಟ್ರಾಪಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿಮ್ಮ 1944 ರ ಶೀರ್ಮನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, **ಯಂ. ರಂಗನಾಥಶೆಟ್ಟಿ,**

35) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಭಾರತದ ಕ್ರೈಸ್ತ.

—೦:—

ಲೇ|| ಯೆಂ. ಡಿ. ಜಾಪೆತ್.

ಇಂದು ಕ್ರಿಸ್ತ ಭಾರತಕ್ಕೆ ಬರಲಾರ ಯಾಕೆಂದರೆ ಭಾರತೀಯನೊಬ್ಬನ—ಮಹಾತ್ಮ ಗಾಂಧಿ—ರೂಪದಲ್ಲಿ ಅವತರಿಸಿದ್ದಾನೆ. ಭಾರತದ ಕೋಟ್ಯಂತರ ಜನರಿಗೆ ಆತನೇ ಕ್ರಿಸ್ತ. ಅವರ ಪಾಲಿಗೆ ಆತನೇ ಜಗದೋದ್ಧಾರಕ, ಸತ್ಯ ಪ್ರಚಾರಕ. ಭಾರತದ ಸಣ್ಣ ಹಳ್ಳಿಯೊಂದರಲ್ಲಿ ಕೂತಿದ್ದಾನೆ ಆತ. ರಾಟೆಯನ್ನು ತಿರುಗಿಸುತ್ತ ಸತ್ಯವನ್ನು ನೂಲುತ್ತಿದ್ದಾನೆ. ಅಖಂಡ ಜನ ಕೋಟಿಗೆ ಪ್ರೇಮ ಮತ್ತು ಬೆಳಕಿನ ಅನುಭವವನ್ನು ಉಂಟುಮಾಡಿ ಕೊಡುತ್ತಿದ್ದಾನೆ.

ಉದಾರಿ ಪಾಶ್ಚಿನೂತ್ಯದೇಶಗಳು ಭಾರತವನ್ನು ''ನಾಗರಿಕ''ವನ್ನಾಗಿ ಮಾಡಲು ಮೊದಲಿಟ್ಟದ್ದು ಅನೇಕ ವರ್ಷಗಳ ಹಿಂದೆ! ಅಂದಿನಿಂದ ಎಲ್ಲ ಪಂಥಗಳ ಸ್ತ್ರೀ—ಪುರುಷರು ಭಾರತ ತೀರವನ್ನು ತುಳಿದಿದ್ದಾರೆ. ಅವರು ಬಂದ ಕಾರಣ ನಾನಾ ವಿಧ. ಸಾಮ್ರಾಜ್ಯ ನಿರ್ಮಾಪಕರಾದ ಲಾರ್ಡ್ ಕ್ಲೈವ್, ವಾರನ್ ಹೇಸ್ಟಿಂಗ್ ಇವರಿಂದ ಹಿಡಿದು ಕಲೋಪಾಸಕರಾದ ಬೆವರ್ಲಿ ನಿಕೋಲಾಸ್‌ವರೆಗೆ ನಾನಾ ಮಹನೀಯರು ನಮ್ಮ ದೇಶಕ್ಕೆ ಬಂದು ಹೋದರು. ಇವರೆಲ್ಲ ಭಾರತದ ಮಿತ್ರರು.

ಭಾರತ ಅದೆಂತಹನಾಡು! ತಮ್ಮ ದೇಶಕ್ಕೆ ಕಾಲಿಟ್ಟ ವಿದೇಶೀಯರಿಗೆಲ್ಲ ಭಾರತೀಯರು ಸುಸ್ವಾಗತ ನೀಡಿದ್ದಾರೆ; ಸಕಲ ಸುಖಕಲ್ಪಿಸಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ ಭಾರತೀಯರಲ್ಲಿ ಈ ಆತಿಥಿಸತ್ಕಾರ ತಪ್ಪೆನ್ನುವಷ್ಟು ಬೆಳೆದಿದೆ. ಅವರ ಗುಣ ಅಷ್ಟು ಮೇಲ್ಮಟ್ಟದ್ದು. ಇದರಿಂದಲೇ ಕ್ಯಾಥೆರೈನ್ ಮೇಯೋ ಮುಂತಾದವರು ಸುಲಭವಾಗಿ ಹಿಮೂಲಯದಿಂದ ಕನ್ಯಾಕುಮಾರಿವರೆಗೆ ಸಂಚರಿಸಿದ್ದು. ಮಿತ್ರನ ವೇಷದಲ್ಲಿರುವ ಶತ್ರುವಿಗೆ ತಾನು ಆಶ್ರಯವಿತ್ತಿರುವುದು ಭಾರತಕ್ಕೆ ಹೇಗೆ ಗೊತ್ತು?

ಸಾಮ್ರಾಜ್ಯಶಾಹಿ ಭಾರತಕ್ಕೆ ಅಡಿಯಿಟ್ಟಾಗ ಅದರ ಹಿಂದೆ ದೊಡ್ಡ ಪರಿವಾರ ಬಂತು. ಅಳ ಬಂದವರು ತನ್ಮ ಕಬ್ಬಿಣದ ಮುಷ್ಟಿಗೆ ಮೊಸಮಲ್ಲು ತೊಡಿಸಿ, ಅದರ ಭೀಷಣ ಸ್ವರೂಪವನ್ನು ಮರೆಮಾಚಬೇಕಷ್ಟೆ. ಭಾರತವನ್ನು ಗೆಲ್ಲಲು ಮತ್ತು ಸೂರೆಮಾಡಲು ಬಂದ ಸೈನಿಕನೂ ವ್ಯಾಪಾರಿಯೂ ತಮ್ಮ ಹಿಂದೆ 'ಮಿಷನರಿ' (ಕ್ರಿಸ್ತ ಧರ್ಮ ಪ್ರಚಾರಕರು)ಗಳನ್ನು ಕರತಂದರು ಯಾಕೆ? ಭಾರತದ ಆತ್ಮೋದ್ಧಾರಕ್ಕಾಗಿ.

ಒಂದು ಧರ್ಮದವರನ್ನು ಇನ್ನೊಂದು ಧರ್ಮಕ್ಕೆ ತಿರುಗಿಸುವುದೆಂದರೆ—ಆ ಕೆಲಸ ಎಷ್ಟೇ ಒಳ್ಳೆಯದಾಗಿರಲಿ—ಅದನ್ನು ಮಾನವನು ಸಹಿಸನು. ಇದರ ಜೊತೆಗೆ ಈಸಾಯಿ ಧರ್ಮದ ತೊಟ್ಟಿಲೆಂದು ಭುಜತಟ್ಟಿಕೊಳ್ಳುವ ದೇಶಗಳು ನಿಜವಾಗಿಯೂ ಆ ಧರ್ಮಕ್ಕೆ ಹೆಸರು -ತಂದಿಲ್ಲವೆಂಬ ವಿಚಾರ ಮೇಲಿಂದ ಮೇಲೆ ಮನಸ್ಸಿಗೆ ಬಂದಾಗಲಂತೂ ತೀರ ಜಿಗುಪ್ಸೆ ಆಗುತ್ತದೆ.

ಇಂದು ಕ್ರಿಸ್ತ ಭರತಖಂಡದಲ್ಲಿ ತನ್ನ ಮಹಿಮೆ ತೋರಿದ್ದಾನೆಂದು ನಾವು ಭಾವಿಸಬೇಕಾಗಿದೆ. ಮಹಾಮಹಿಮನಾದ ಸಾಧುವೊಬ್ಬನು ಕ್ರಿಸ್ತನ ಆದರ್ಶ ಜ್ಯೋತಿಯನ್ನು ಇಲ್ಲಿ ಎತ್ತಿ ಹಿಡಿದಿದ್ದಾನೆ. ಮೊಟಮೊದಲು ಯೂರೋಪಿನಲ್ಲಿ ಅನೇಕರು ಈಸಾಯಿಧರ್ಮಕ್ಕಾಗಿ ಜೀವಬಿಟ್ಟರೆ. ಇಂದು ದಿನವಹಿ ಅಲ್ಲಿ ಜೀವಹರಣ ನಡೆಯುತ್ತಲೇ ಇದೆ. ಇಂದು ಯೂರೋಪು ಕತ್ತಿಯ ಧರ್ಮವನ್ನು ಎತ್ತಿ ಹಿಡಿದಿದೆ. ಇದು ಕ್ರಿಸ್ತನ ನೈತಿಕ್ಕೆ ತೀರ ವಿರುದ್ಧವಾದುದು.

ಈಸಾಯಿ ಪಾದ್ರಿಗಳು ಭರತಖಂಡಗಳಲ್ಲಿ ಧರ್ಮಬೋಧನೆ ಮಾಡಬೇಕಾಗಿಲ್ಲ. ಎಲ್ಲರೂ ಯುರೋಪಿನ ಕಡೆ ಸಾಗಿ, ಯುದ್ಧದಿಂದ ಕಂಗೆಟ್ಟಿರುವ ಜನಕ್ಕೆ ಕ್ರಿಸ್ತ ಸಂದೇಶವನ್ನು ಬೆರೆಯಿರಿ. ಈ ಸಂದೇಶವನ್ನು ಈಸಾಯಿ ಪಾದ್ರಿಗಳಿಗೆ ಕೊಡಲ್ಲ ಮಹಾನುಭಾವನೊಬ್ಬ ಭಾರತದಲ್ಲಿದ್ದಾನೆ. ತನ್ನ ವಾಸಸ್ಥಳ ಕೇಂದ್ರ ಭಾರತದಲ್ಲಿರುವ ಒಂದು ಹಳ್ಳಿ. ಆತ ಅಲ್ಲಿ ದಿನವಹಿ ರಾಟೆಯಿಂದ ಸತ್ಯವನ್ನು ಹೊರತೆಗೆಯುತ್ತಿದ್ದಾನೆ. ಆ ಸತ್ಯ ಇರುವುದು ನಾನಾ ಧರ್ಮಗ್ರಂಥಗಳಲ್ಲಿ ಅಡಗಿಕೂತಿರುವ ಜನರಿಗೂ ಜ್ಞಾಪಕವಿಲ್ಲ.

ಕ್ರಿಸ್ತ ಇಂದು ಭಾರತಕ್ಕೆ ಬರಲಾರ ಯಾಕೆಂದರೆ ಕ್ರಿಸ್ತ ಇಲ್ಲೇ ಇದ್ದಾನೆ.

ಈಸಾಯಿ ಪಾದ್ರಿಗಳಿಂದ ನಮಗೆ ಆಪಕಾರವಾಗುತ್ತಿರುವುದು ಕೇವಲ ಧಾರ್ಮಿಕ ಕ್ಷೇತ್ರದಲ್ಲಲ್ಲ. ಈ ದೇಶದ ಅಧೀನತೆಯನ್ನು ಮುಂದುವರಿಸಲು ಸಹ ಅವರು ಸಾಧನವಾಗಿದ್ದಾರೆ. ಇದು ಅವರಿಗೆ ಗೊತ್ತಿದೆಯೋ ಇಲ್ಲವೋ!

ಇಂದು ಭಾರತಕ್ಕೆ ಬೇಕಾಗಿರುವುದು ಧಾರ್ಮಿಕ ಪೋಕ್ಷವಲ್ಲ. ಅಧ್ಯಾತ್ಮಿಕತೆಯನ್ನು ನಮಗೆ ಯಾರೂ ಬೋಧಿಸಬೇಕಾಗಿಲ್ಲ. ಪುರಾತನ ಕಾಲದಿಂದ ಭಾರತ ಆದರ್ಶ ಧಾರ್ಮಿಕತೆಯನ್ನು ಎತ್ತಿ ಹಿಡಿದಿದೆ. ಮಹಾತ್ಮ ಗಾಂಧಿಯನವರೇ ಹೀಗೆ ಹೇಳಿದ್ದಾರೆ. — 'ದೇವರು ಸಹ ಬಡವರ ಮುಂದೆ ಅನ್ನದ ರೂಪದಲ್ಲಿ ಆಲ್ಲದೆ ಮತ್ತಾವ ರೂಪದಲ್ಲೂ ನಿಲ್ಲಲಾರ' ನಮಗೆ ಮಿತ್ರರೆಂ ಬೇಕು ನಿಜ, ಅವರು ಸಮಯಕ್ಕೆ ನೆರವಾಗುವಂತಿರಬೇಕು! ಈ ನಾಡಿನಲ್ಲಿ ಸ್ವಾಗತ ಬಯಸುವವರು ಶ್ರೀ. ಸಿ. ಎಫ್. ಆಂಡ್ರೂಸ್, ವೆರಿಯರ್ ಎಲ್ವಿನ್, ಬಿಷಪ್ ಫಿಷರ್ ಮುಂತಾದ ಮಹನೀಯರ ರೂಪದಲ್ಲಿ ಬರಬೇಕು. ಅವರೆಲ್ಲ ಭಾರತದ ಆಜನ್ಮಸಿದ್ಧವಾದ ಸ್ವಾತಂತ್ರ್ಯದ ಹಕ್ಕನ್ನು ಎತ್ತಿ ಹಿಡಿದಿದ್ದಾರೆ. ನಿಜವಾದ ಸೇವಾ ಭಾವನೆಯಿಂದ ತುಂಬಿ ಅವರು ಭಾರತಕ್ಕೆ ಬಂದರು. ಬಹಿರಂಗವಾಗಿ ಭಾರತದ ಆದರ್ಶವನ್ನು ಎತ್ತಿ ಹಿಡಿದರು. ಇದರ ಫಲವಾಗಿ ಅಧಿಕಾರಿಗಳಿಗೆ ಅಸಹನೆ ಹುಟ್ಟಿತು. ಅದನ್ನು ಸಹ ಆ ಮಹನೀಯರು ಪ್ರತಿಭಟಿಸಿ ನಿಂತರು.

ಇಂತಹ ಮಹಾ ಆದರ್ಶ ಇಂದು ಕ್ರಿಸ್ತಪಾದ್ರಿಗಳ ಕ್ಷೇತ್ರದಲ್ಲಿ ಕಾಣಬರ್ಪಾಗಿದೆ. ಭಾರತವು ಸ್ವಾತಂತ್ರ್ಯದ ಗಾಳಿಯನ್ನು ಸವಿಯಲು ನೋದಿಲಿಡುವವರೆಗೆ ನಮಗೆ ಕ್ರಿಸ್ತಪಾದ್ರಿಗಳಗೊಡವೆ ಬೇಡ. ಭಾರತಕ್ಕೆ ಒಳ್ಳೆಯದನ್ನು ಬೆಯಸುವವರು ಅದರ ಕದನದಲ್ಲಿ ಭಾಗವಹಿಸಬೇಕು. ಬಂದೆದ್ದನ್ನೆಲ್ಲ ಅನುಭವಿಸಲು ಸಿದ್ಧರಿರಬೇಕು. ಪಾವರ್ತ್ಯ ದೇಶಗಳಿಗೆ ಬೇಕಾಗಿರುವುದು ಧಾರ್ಮಿಕ ಮುಕ್ತಿಯಲ್ಲ; ರಾಜಕೀಯ ಸ್ವಾತಂತ್ರ್ಯ—ಎಂದು ಪಾಶ್ಚಿನೂತ್ಯ ದೇಶಗಳ ನಾಯಕರಿಗೆ ಬೋಧಿಬೇಕು. ಪಾವರ್ತ್ಯ ದೇಶಗಳು ಸಮಾನಸ್ಕಂಧರಂತೆ ಕೈ ಕುಲಕಿಸಿದಾಗ ಈಸಾಯಿ ಪಾದ್ರಿಗಳು ಭಾರತಕ್ಕೆ ಬರಲಿ—ಬಂದು 20ನೇ ಶತಮಾನದ ಕ್ರಿಸ್ತನಿಗೆ ಪಾದಸೇವೆ ಸಲಿಸಲಿ.' (ವಿ. ಕ.)

ಗಾಂಧಿಜೀಯ ಸಂದೇಶ.

ವಾರ್ಸಾದ ಯಾತನೆಯು ಪೋಲೇಂಡಿನ ಯಾತನೆ, ಪೋಲರ ಯಾತನೆಯೇ ದಲಿತ ಜಗತ್ತಿನ ಯಾತನೆ, ಪೋಲೆಂಡ್ ಯಾವ ಮಿತ್ರ ರಾಷ್ಟ್ರದ ಮೇಲೆಯೂ ತನ್ನ ವಿಮೋಚನೆಗಾಗಿ ಭರವಸೆ ಇಡಬೇಕಾಗಿಲ್ಲ. ದೇವರೊಬ್ಬರ ಮೇಲೆ ಭರವಸೆ ಇಡಲಿ.' ಇದು ಪೋಲರಿಗಾಗಿ ಗಾಂಧಿಯವರಿತ್ತ ಸಂದೇಶ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.